

ಮಂಡಿ ಮರುಜೋಡಣೆ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಕರ್ನಾಟಕದಲ್ಲಿ ವರ್ಷಕ್ಕೆ ಈ ಶಸ್ತ್ರಚಿಕಿತ್ಸೆಗೆ ಮಾಡಿಸಿಕೊಳ್ಳುವವರ ಸಂಖ್ಯೆ ಏಳು ಸಾವಿರಕ್ಕೂ ಹೆಚ್ಚು. ಇವರಲ್ಲಿ ಶೇ.70ರಷ್ಟು ಮಂದಿ ಮಹಿಳೆಯರು ಎಂಬುದು ಆತಂಕದ ವಿಚಾರ.

ಇದಕ್ಕೆ ಪ್ರಮುಖ ಕಾರಣ ದೈಹಿಕ ಚಟುವಟಿಕೆಯ ಕೊರತೆ, ಮಧುಮೇಹ, ಥೈರಾಯ್ಡ್, ಏರು ರಕ್ತದೊತ್ತಡ, ಬೊಜ್ಜು, ಅತಿತೂಕ, ವ್ಯಾಯಾಮ ಇಲ್ಲದೇ ಇರುವುದು, ಆನುವಂಶೀಯ ತೊಂದರೆಗಳು ಇರುವವರಲ್ಲಿ ಮಂಡಿ ನೋವು ಸಮಸ್ಯೆ ಹೆಚ್ಚು. ಅತಿಯಾಗಿ ತಿನ್ನುವುದು, ಕರಿದ ತಿಂಡಿ, ಸಿಹಿತಿಂಡಿ, ಪಿಜ್ಜಾ, ಬರ್ಗರ್‌ಗಳಂಥ ಆಹಾರವನ್ನು ಊಟದ ಸಮಯದಲ್ಲಿ ತಿನ್ನುವುದು.. ಮುಂತಾದವು ಮಂಡಿನೋವಿಗೆ ಆಹ್ವಾನ ನೀಡಿದಂತೆಯೇ.



ಮಂಡಿ ಮೂಳೆ ಶಸ್ತ್ರಚಿಕಿತ್ಸಾ ತಜ್ಞ ಡಾ.ಜೆ.ವಿ.ಶ್ರೀನಿವಾಸ್

'ಅತಿಯಾಗಿ ಮಂಡಿನೋವಿನ ಸಮಸ್ಯೆ ಇದ್ದವರಿಗೆ ಫಿಸಿಯೊಥೆರಪಿ, ತೂಕ ಕಡಿಮೆ ಮಾಡಿಕೊಳ್ಳುವುದರಿಂದ, ವ್ಯಾಯಾಮದಿಂದ ಮತ್ತು ಕೆಲವೊಮ್ಮೆ ನೋವು ನಿವಾರಕ ಮಾತ್ರೆಗಳಿಂದ ಮಂಡಿನೋವನ್ನು ಸಂಪೂರ್ಣ ಗುಣಪಡಿಸಬಹುದು. ನೋವು ವಿಪರೀತವಾಗಿ ಬಹಳ ದಿನಗಳಿಂದ ಬಾಧೆ ಕೊಡುತ್ತಿದ್ದರೆ ಶಸ್ತ್ರಚಿಕಿತ್ಸೆಯೊಂದೇ ದಾರಿ.

ಅತಿಯಾದ ಮಂಡಿನೋವು ಇದ್ದವರಿಗೆ ದಿನ ನಿತ್ಯದ ಕೆಲಸ ಮಾಡಿಕೊಳ್ಳಲು ಸಾಧ್ಯವಾಗದೇ ಇರಬಹುದು. ನಿದ್ದೆ ಮಾಡಲು ಕಷ್ಟ (ರೆಸ್ಟ್ ಪೆಯಿನ್), ಮೂಳೆಗಳು ಸೊಟ್ಟಗಾಗಿದ್ದರೆ (ಡಿಫಾರ್ಮಿಟೀಸ್) ಸರ್ಜರಿ ಅನಿವಾರ್ಯ' ಎನ್ನುತ್ತಾರೆ ಡಾ.ಜೆ.ವಿ.ಶ್ರೀನಿವಾಸ್.

ಮಂಡಿ ಮರು ಜೋಡಣಾ ಶಸ್ತ್ರಚಿಕಿತ್ಸೆ ಅಪಾಯದ್ದು ಏನಲ್ಲ. 30 ವರ್ಷದವರಿಂದ 90 ವರ್ಷದ ವಯೋವೃದ್ಧರವರೆಗೂ ಸರ್ಜರಿ ಮಾಡುತ್ತೇವೆ. ಮಧುಮೇಹ, ರಕ್ತದೊತ್ತಡದಂತಹ ಜೀವನಶೈಲಿ ಕಾಯಿಲೆ ಇದ್ದರೂ ಸರ್ಜರಿ ಮಾಡಿಸಿಕೊಳ್ಳಬಹುದು. ಸರ್ಜರಿಯ ಯಶಸ್ಸಿನ ಮಟ್ಟ ಶೇ.98ರಷ್ಟು ಇರುತ್ತದೆ. ಆದರೆ ಶಸ್ತ್ರಚಿಕಿತ್ಸೆಯ ನಂತರ ಸರಿಯಾಗಿ ಆರೈಕೆ ಮಾಡದಿದ್ದರೆ, ನುರಿತ ವೈದ್ಯರ ಬಳಿ ಮಾಡಿಸದೇ ಇದ್ದರೆ, ಸೋಂಕು ತಗುಲಿದರೆ, ರಕ್ತ ಕಟ್ಟಿದ್ದರೆ, ಸರ್ಜರಿ ಮಾಡಿದಾಗ ಕೀಲುಗಳ ಮಧ್ಯೆ ಜೋಡಿಸಿದ ಸಾಧನ ಸರಿಯಾದ ಜಾಗದಲ್ಲಿ ಇರದೇ ಇದ್ದರೆ ಸರ್ಜರಿ ಮಾಡಿಸಿಕೊಂಡರೂ ಸಮಸ್ಯೆಗೆ ಪರಿಹಾರ ಸಿಗದೇ ಹೋಗುವ ಸಾಧ್ಯತೆ ಇದೆ' ಎಂದು ಎಚ್ಚರಿಸುತ್ತಾರೆ ಅವರು.

ಗ್ರಾಮೀಣ ಪ್ರದೇಶಗಳಿಂದ, ಪಟ್ಟಣ ಪ್ರದೇಶಗಳಿಂದ ಆಪರೇಶನ್‌ಗಾಗಿ ಬರುವ ಮಹಿಳೆಯರ ಸಂಖ್ಯೆ ಹೆಚ್ಚು. ಬಡವರಿಗಾಗಿ ಸರ್ಕಾರ ಕೊಡುವ ಆರೋಗ್ಯ ಭಾಗ್ಯ ಯೋಜನೆ, ಯಶಸ್ವಿನಿ, ವಾಜಪೇಯಿ ಆರೋಗ್ಯ ಯೋಜನೆ, ಇಎಸ್‌ಐ ಸೌಲಭ್ಯ ಇರುವ ರೋಗಿಗಳು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಯೋಜನೆಯ ಸಂಪೂರ್ಣ ಪ್ರಯೋಜನ ಪಡೆಯಬಹುದು.

## ಬಾಲಕಿಯರಲ್ಲೂ

ಮಂಡಿ ನೋವಿಗೆ ಸರ್ಜರಿ ಮಾಡಿಸಿಕೊಳ್ಳುವುದರಲ್ಲಿ ಬಾಲಕಿಯರೂ ಹೊರತಾಗಿಲ್ಲ. ಆನುವಂಶಿಕ ಸಮಸ್ಯೆಗಳಿಂದ ಬಹಳಷ್ಟು ಹುಡುಗಿಯರು ಮಂಡಿ ನೋವು ಅನುಭವಿಸುತ್ತಿರುವುದಲ್ಲದೆ ಶಾಶ್ವತ ಪರಿಹಾರಕ್ಕಾಗಿ ಸರ್ಜರಿಯ ಮೊರೆ ಹೋಗುತ್ತಿದ್ದಾರೆ.

ಮಂಡಿ ಊನದಿಂದಾಗಿ ನಡೆದಾಡಲು ಅಸಾಧ್ಯವಾದ ಹದಿಮೂರು ವರ್ಷದ ಬೆಂಗಳೂರಿನ ಗಗನಶ್ರೀ ಇದಕ್ಕೆ ತಾಜಾ ಉದಾಹರಣೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಗಗನಶ್ರೀ ಇದೀಗ ಸರಾಗವಾಗಿ ನಡೆದಾಡುತ್ತಾಳೆ. ಬೇರೆ ಮಕ್ಕಳ ಮುಂದೆ ಓಡಾಡಲು ಹಿಂಜರಿಯುತ್ತಿದ್ದ ಬಾಲಕಿ ಈಗ ಎಲ್ಲರಂತೆ ಸಂತೋಷವಾಗಿದ್ದಾಳೆ.

ಹಿನ್ನೆಲೆ ಇಷ್ಟೆ. ಗಗನಶ್ರೀಗೆ ಎರಡು ಕಾಲುಗಳು ವಿರೂಪತೆಯಿಂದ ಕೂಡಿದ್ದವು. ಸತತವಾಗಿ ಹಲವು ಆಸ್ಪತ್ರೆಗಳನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದರೂ ಯಾವುದೇ ಪ್ರಯೋಜನವಾಗಲಿಲ್ಲ. ಇದರಿಂದ ದೈಹಿಕ, ಮಾನಸಿಕ ಯಾತನೆ ಅನುಭವಿಸುತ್ತಿದ್ದ ಬಾಲಕಿ ಕೊನೆಯ ಪ್ರಯತ್ನ ಎಂಬಂತೆ ಫೋರ್ಟಿಸ್ ಆಸ್ಪತ್ರೆ ಮೊರೆ ಹೋದಳು. ನುರಿತ ವೈದ್ಯರ ತಂಡ ಸತತ ಆರು ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿದ ಫಲವಾಗಿ ಈಕೆಯ ಬಾಳಿನಲ್ಲಿ ಹೊಸ ಆಶಾಕಿರಣ ಮೂಡಿದೆ. ವಾಸ್ತವವಾಗಿ ಆಕೆಗೆ ಇದ್ದದ್ದು ಸ್ಕ್ಯಾಂಡಿಲೊ ಎಪಿಸೀಲ್ ಎಂಬ ಮೂಳೆ ಸಂಬಂಧಿತ ಸಮಸ್ಯೆ. ಆಕೆಯ ಮೂಳೆಗಳಲ್ಲಿ ಸಮಸ್ಯೆ ಇದ್ದವು. ಹೀಗಾಗಿ ಮೂಳೆ ಬೆಳವಣಿಗೆ ಕುಂಠಿತವಾಗಿತ್ತು. ಈ ಸಮಸ್ಯೆ ಪರಿಹರಿಸಲು ಡಿಫಾರ್ಮಿಟಿ ಕರೆಕ್ಷನ್ ಶಸ್ತ್ರಚಿಕಿತ್ಸೆ ನಡೆಸಿ ಮಂಡಿ ಸಮಸ್ಯೆ ನಿವಾರಿಸಲಾಯಿತು. ಈಗ ಎಲ್ಲರಂತೆ ಬಾಳಲು ಅನುಕೂಲವಾಗಿದೆ. ಹೊಸ ಭರವಸೆಯೊಂದಿಗೆ ಉತ್ಸಾಹದೊಂದಿಗೆ ಶಾಲೆಯ ಹಾದಿ ತುಳಿದಿದ್ದಾಳೆ ಗಗನಶ್ರೀ.

ಸಾಮಾನ್ಯವಾಗಿ ಬಾಲಕರಿಗೆ ಹೋಲಿಸಿದರೆ ಮಂಡಿ ನೋವಿನ ಸಮಸ್ಯೆ ಬಾಲಕಿಯರಲ್ಲಿ ಹೆಚ್ಚು. ಆನುವಂಶಿಕ ತೊಂದರೆ, ಹಾರ್ಮೋನುಗಳ ಏರುಪೇರು, ಕುಂಠಿತ ಬೆಳವಣಿಗೆ ಮುಂತಾದವು ಇದಕ್ಕೆ ಕಾರಣ.

**ವೈದ್ಯರ ಸಂಪರ್ಕ: 96633 87680/ 080–66214121**